# ಹೂವು ಹಾಸಿಗೆ ಚಂದ್ರ ಚಂದನ ಕಂಪನ...

ಈ ಹುಡುಗಿ ಸುಮಿಗೂ ಸಮುದ್ರ ಅಂದ್ರೆ ರೋಮಾಂಚನ ಅಂತೆ; ಕಡಲೆಂದರೆ ನಿತ್ಯೋತ್ಸವ ಅಂತೆ! ಅವಳ ಕಣ್ಣುಗಳಲ್ಲಿ ಅದೆಂಥ ವಿಸ್ಮಯದ ಥಳಕು, ತುಂಟತನದ ಬಳಕು, ಉತ್ಸಾಹದ ಬೆಳಕು! ಅರರೆ... ಇದೇನಿದು ಥಳಕು ಬಳಕು ಬೆಳಕು? ತಾನು ಕವಿಯಾಗಿ ಬಿಟ್ಟೆನಲ್ಲ! ಈ ಬಯಲುಸೀಮೆಯ ಹುಡುಗಿ ತನ್ನಲ್ಲಿ ಏನೋ ಹೊಸತನ ಕಾಣಿಸುತ್ತಿದ್ದಾಳೆ. ಜಗತ್ತು ಬೇರೇನೇ ಆಗಿ ಕಾಣುತ್ತಿದೆ. ಬದುಕು ಸುಂದರವಾಗಿದೆ ಅನಿಸುತ್ತಿದೆ... ಮುಂಜಾನೆ ಸ್ಪೋರ್ಟ್ಸ್ ಪ್ರಾಕ್ಟೀಸು, ಆಮೇಲೆ ಕಾಲೇಜು, ಮಧ್ಯಾಹ್ನದ ನಂತರ ಓದ್ಕೊಳ್ಳೋದು, ಸಂಜೆ ಬೀಚ್ ಮೇಲೆ ಆಟ, ಮುಸ್ಸಂಜೆ ಹೊತ್ತಿಗೆ ಪಾತಿದೋಣಿಯಲ್ಲಿ ಕೂತು ಗಾಳ ಹಾಕುವುದು – ಹೀಗೆ ರಾತ್ರಿ ಹಾಸಿಗೆಗೊರಗಿದರೆ ಸಾಕು, ದಣಿವಿನಿಂದಾಗಿ ನಿದ್ದೆಗೆ ಜಾರುತ್ತಿದ್ದವನಿಗೆ, ಈಗ ಮಧ್ಯರಾತ್ರಿವರೆಗೂ ಏನೇನೋ ಕನಸುಗಳು ಕಚಗುಳಿಯಿಟ್ಟು ಜಾಗರದಲ್ಲಿಡುತ್ತಿವೆ!

***

ಪ್ರೀತಂ ನಸುಕಿನಲ್ಲಿಯೇ ಎದ್ದು ರೆಡಿಯಾಗಿ, ಆಯಿಗೆ ಕೈಮುಗಿದು ಮೈದಾನಕ್ಕೆ ಬಂದಿದ್ದ. ಅದು ಜಿಲ್ಲಾಮಟ್ಟದ ಕ್ರೀಡಾಕೂಟ ಆಗಿದ್ದರಿಂದ ಕ್ರೀಡಾಪಟುಗಳು, ಕ್ರೀಡಾಪ್ರೇಮಿಗಳು ಕಾರವಾರದ ಮಾಲಾಗ್ರೌಂಡಿನಲ್ಲಿ ಓಡಾಡಿಕೊಂಡಿದ್ದರು. ಪ್ರೀತಂ ಬಯಲುಸೀಮೆಯ ಹುಡುಗಿಗೆ ಟೂರ್ನಮೆಂಟ್ ನೋಡಲು ಬಾ ಎಂದು ಹೇಳುವುದನ್ನು ಮರೆತದ್ದಕ್ಕೆ ತನ್ನನ್ನೇ ಬೈದುಕೊಂಡ. ಅವಳು ಶಿರ್ವಾಡಾದ ರೇಲ್ವೆ ಸ್ಟೇಶನ್ ರೋಡಿನಲ್ಲಿ ಮನೆ ಮಾಡಿರುವುದನ್ನು ಹೇಳಿದ್ದಳು. ಆಕೆಯ ಮೊಬೈಲ್ ನಂಬರ್ ಕೂಡ ಗೊತ್ತಿಲ್ಲದ್ದಕ್ಕೆ ಹಳಹಳಿಸಿದ. ಆ ಹುಡುಗಿ ಇಲ್ಲಿದ್ದರೆ ನನ್ನ ಜಾವೆಲಿನ್ ಥ್ರೋ ಹೇಗಿರುತ್ತಿತ್ತು? ಬಹುಶಃ ಇನ್ನಷ್ಟು ಸ್ಫೂರ್ತಿ ಬರುತ್ತಿತ್ತು. ಸುಮಿಯ ಹಾಗೆ ತಾನು ಮೋಹಕವಾಗಿ ಮಾತಾಡಲಾರೆ. ಆದರೆ ಆಟದ ಮೂಲಕ ಒಂಚೂರು ಹೀರೋಗಿರಿ ತೋರಿಸುವ ಅವಕಾಶವಾಗುತ್ತಿತ್ತು... ಅಂಥದೇ ಯೋಚನೆಯಲ್ಲಿ ವಾರ್ಮ್ ಅಪ್ ಮಾಡುತ್ತಿರುವಾಗ 'ವ್ವಾಯ್ ಹೀರೋ, ಆಲ್ ದಿ ಬೆಸ್ಟ್' ಎಂಬ ಧ್ವನಿ ಕೇಳಿ ಸಟಕ್ಕನೆ ಅತ್ತ ನೋಡಿದ. ಏನಾಶ್ಚರ್ಯ, ಅವಳೇ! 'ನಂಬೂಕಾಗ್ತಿಲ್ಲ... ರಾಶಿ ಖುಶಿಯಾಯ್ತು, ಹಾಂ' ಅಂದ. ಸುಮಿ ನಾಟಕೀಯವಾಗಿ 'ಕಡಲು ತೀರದ ಹುಡುಗನೊಬ್ಬ ಜಾವೆಲಿನ್ ಚಾಂಪಿಯನ್ ಅಂತ ಗೊತ್ತಾಯ್ತು... ಖಾತ್ರಿ ಮಾಡ್ಕೊಳ್ಳೋಕ್ ಬಂದೀನಿ' ಅಂದಳು. 'ಹೇಯ್, ಮತ್ತೊಮ್ಮೆ ವರ್ಲ್ಡ್ ಫೇಮಸ್ ಅಂತ ಹಿಗ್ಗಬೇಡ. ನಮ್ಮ ನೋಟೀಸ್ ಬೋರ್ಡಿನಲ್ಲಿ ವಿಷಯ ಗೊತ್ತಾಗಿ ಬಂದೆ, ಅಷ್ಟೆ' ಎಂದು ಮೈದಾನ ನವಿರಾಗಿ ಕಂಪಿಸುವಂತೆ ನಕ್ಕಳು.

'ಬಂದದ್ದು ರಾಶಿ ಖುಶಿಯಾಯ್ತು' ಅಂದ. 'ಅರೆ! ಇನ್ನೂ ಖುಶಿಯಾಗುವಂಥ ಮಾತು ಕೇಳು ಹುಡುಗಾ. ಈವರೆಗೆ ನಾನು ಹುಡುಕುತ್ತಿದ್ದದ್ದು ಕಡಲನ್ನು ಮಾತ್ರ ಎಂದು ತಿಳಿದಿದ್ದೆ. ಕಡಲ ಸೆಳೆತವು ನನ್ನನ್ನು ಕಲಬುರ್ಗಿಯಿಂದ ಕಾರವಾರಕ್ಕೆ ಬರುವಂತೆ ಮಾಡಿದ್ದೂ ಖರೆ. ಆದರೆ ನನಗೆ ಸಿಕ್ಕಿದ್ದು

